ತುಳುಸಂಧಿಯ ಕತೆ:—೩೨.

ಮಸುಕಿದ ವಂಶಜ್ಯೋತಿಯ ಪುನರುತ್ಥಾನ!

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆ ದಿನ ನಟ್ಟಿರುಳಲ್ಲಿ ಜಾವದ ಹೊತ್ತಿನಲ್ಲಿ ಜಾಲಕೊರತಿ ದೈವ ದೇಶಭಾರಿ ಬೀಡಿನಲ್ಲಿ ಮಲಗಿದ್ದ ತಂಗಡಿ ತಟ್ಟುಗಳ ಸ್ವಪ್ನದಲ್ಲಿ ಬಂದು ಹೇಳಿತು:

"ನೀನು ಮೆತ್ತನೆಯ ಹಾಸಿಗೆಯಲ್ಲಿ ಹೂವಿನ ತಲೆದಿಂಬಿನಲ್ಲಿ ಒರಗಿ ಸಮ್ಮಾನದ ನಿದ್ರೆಯಲ್ಲಿ ಪವಡಿಸಿರುವೆಯಲ್ಲಾ? ಮಾನಿಮಂಗರಕ್ಕೆ ಹೋದ ನಿನ್ನ ಅಣ್ಣ ರಾಜಭಾರಿ ಪಡ್ಡೆಲನನ್ನು ಮಂಗರದರಸ, ನಿನ್ನನ್ನು ಮದುವೆಯಾಗುವುದಕ್ಕೆ ಬಯಸಿ ನೆಂಟಸ್ತಿಕೆ ನೆಲೆಮಾಡುವುದಕ್ಕೆ ಬಲವಂತಿಸಿದನು. ನಿನ್ನ ಅಣ್ಣ ನೆಂಟಸ್ತಿಕೆಗೆ ಸುತರಾಂ ಒಡಂಬಡದ ಕಾರಣ ಅವನನ್ನು ಮಂಗರದರಸು ದಿಂಡೆ ಸಂಕಲೆಯಲ್ಲಿ ಮುಂಡು ಮಾಳಿಗೆಯಲ್ಲಿ ದಿಗ್ಬಂಧನದಲ್ಲಿಟ್ಟನು. ನಿನ್ನ ಅಣ್ಣನು ಸೆರೆಮನೆಯಲ್ಲಿ ಚಿತ್ರಹಿಂಸೆಗೊಳಗಾಗಿರುವುದನ್ನು ನೀನು ಲಕ್ಷಿಸುತ್ತಿಲ್ಲವೇ?"

ತಟ್ಟನೆ ಎಬ್ಬಿಸಿದಂತಾಗಿ ದಡಾಧಡಿಸಿಕೊಂಡು ತಂಗಡಿ ತಟ್ಟುಗ ಹಾಸಿಗೆಯ ಮೇಲೆ ಎದ್ದು ಕೂತುಕೊಂಡಳು. ಭಯಕಂಪಿತಳಾಗಿ ತುಸುಕ್ಷಣ ಹಾಗೇ ಕಳೆದಳು. ಬಳಿಕ ಸಂಭಾಳಿಸಿಕೊಂಡು ತನಗೆ ಬಿದ್ದ ಸ್ವಪ್ನದ ಮಾತನ್ನು ಅನುಸ್ಮರಿಸಿದಳು.

"ಹಾ! ನನ್ನ ಅಣ್ಣನವರಿಗೆ ಇಂತಹ ಆಪತ್ತು ಬಂತೆ!" ಎಂದುಕೊಂಡು ಗಳಗಳನೇ ಕಂಬನಿ ಸುರಿಸುತ್ತ ಮಮ್ಮಲ ಶೋಧಿಸಿದಳು.

ಆರು ರಾಶಿ ಕಳೆದು ಅರುಣೋದಯವಾಯಿತು. ತಂಗಡಿ ತಟ್ಟುಗ ಹೋಗಿ ಕಟ್ಟೆಪಲ್ಲಿ ಮೇಲಾದ ಒಂದು ತಾಳೆಯ ಓಲೆಯನ್ನು ಎಳೆದು ತೆಗೆದಳು. ಬುಡ ಮತ್ತು ತುದಿಯ ಭಾಗಗಳನ್ನು ಕತ್ತರಿಸಿ ತೆಗೆದಳು. ನಡುಭಾಗ, ಎತ್ತಿಕೊಂಡಳು. ಅದರ ಬೆನ್ನಿನ ಕಡ್ಡಿಯನ್ನು ಸುಲಿದಳು. ಹೊಟ್ಟೆಯ ಉಬ್ಬುವಿನಂಶವನ್ನು ಹರಿದಳು. ಓಲೆಗೆ ಎಣ್ಣೆ ಮತ್ತು ಅರಸಿನದ ರಂಗು ಬಳಿದಳು. ಲೋಹದ ಕಂಠದಿಂದ ಓಲೆಯ ಮೇಲೆ ಈ ರೀತಿ ಒಕ್ಕಣಿಸಿ ಬರೆದಳು:

"ಅಣ್ಣಾ. ನಿಮ್ಮನ್ನು ಉಪಾಯಾಂತರದಿಂದ ಅಪಾಯದ ದಿಂಡೆ ಸಂಕಲೆಯಲ್ಲಿ ಬಿಗಿದು ಮುಂಡು ಮಾಳಿಗೆಯಲ್ಲಿ ದಿಗ್ಬಂಧನದಲ್ಲಿ ಹಾಕಿದರೇ! ಯುಕ್ತಿ ಪ್ರಯುಕ್ತಿಯಿಂದ ಪಾರಾಗಿ ಬನ್ನಿರಿ. ಸಾಧ್ಯವಾಗದೇ ಹೋದ ಕಾಲದಲ್ಲಿ, ಯಾವ ಕಾರಣಕ್ಕಾಗಿ ನೀವು ಪ್ರಾಣಾಂತಿಕ ಕಷ್ಟಕ್ಕೆ ಗುರಿಯಾಗಿರುವಂತಾಗಿರುತ್ತದೋ—ಆ ನನ್ನ ನೆಂಟಸ್ತಿಕೆಗೆ—ಭಾಷೆ ಕೊಟ್ಟು ಬನ್ನಿರಿ. ಬಾಕಿ ಮುಖತಃ"

ಬರೆದ ಓಲೆಗೆ ತನ್ನ ಮುತ್ತುಮುದ್ರೆಯುಂಗುರದ ಮೊಹರೊತ್ತಿದಳು. ಚಂದ್ರಿಕೆ ಮಡಚಿ ಕಟ್ಟುಬಿಗಿದಳು. ಜಾಲಕೊರತಿಯನ್ನು ಮನಸ್ಸಿನಲ್ಲಿ ನೆನೆದು ಓಲೆಯ ಕಟ್ಟನ್ನು "ಇಡೆ ತಡ್ಕ" (ಬಾಗಿಲಿನ ತಲೆಪಟ್ಟಿ)ದಲ್ಲಿಟ್ಟಳು.

ಜಾಲಕೊರತಿ ಆ ಓಲೆಯನ್ನು ಎತ್ತಿಕೊಂಡು ಮಾಯಾರೂಪದಿಂದ ಮಾಣಿಮಂಗರದ ಮುಂಡುಮಾಳಿಗೆಯ ಸೆರೆಮನೆಗೆ ಸಾಗಿತು.

ರಾಜ ಪಡ್ಡೆಲ ದುಃಖಭಾರದಿಂದ ಅಸವಳಿದು ಬೆಂಡಾಗಿ ಮಲಗಿದ್ದನು. ಜಾಲಕೊರತಿ ಅವನಿಗೆ ಸ್ವಪ್ನದಲ್ಲಿ ಈ ರೀತಿ ನುಡಿಯಿತು:

"ಸೆರೆಮನೆಯಲ್ಲಿ ಬಿದ್ದು ಏಕೆ ದುಃಖಪಡುತ್ತಿರುವೆ? ಭಾಷೆಕೊಡು. ನೆಂಟಸ್ತಿಕೆಗೆ ಒಪ್ಪು ಮತ್ತೆ ಹೊರಟುಬಾ. ಇದೋ! ಇಲ್ಲಿ ನಿನ್ನ ತಂಗಿ ಬರೆದ ಓಲೆಯುಂಟು. ಅದನ್ನು ಓದಿ ಮನದಟ್ಟುಮಾಡಿಕೊಂಡು ಹೊರಡು. ನಿನ್ನ ಬೆಂಗಡೆ ಸಹಾಯಕ್ಕೆ ನಾನಿದ್ದೇನೆ."

ಜಾಲಕೊರತಿ ಓಲೆಯನ್ನು ಪಡ್ಡೆಲನ ತಲೆಯ ಪಕ್ಕದಲ್ಲಿಟ್ಟು ಅದೃಶ್ಯವಾಯಿತು.

ಪಡ್ಡೇಲನಿಗೆ ಥಟ್ಟನೇ ಎಚ್ಚರವಾಯಿತು. ಭಯ ಮತ್ತು ಗಾಬರಿ ಅವನನ್ನೊಮ್ಮೆಲೇ ಆವರಿಸಿತು. ದಿಗ್ಭ್ರಮೆ ಡಾವಸ್ಥೆಯಲ್ಲಿ ಕಣ್ಣೆವೆಗಳನ್ನು ಎತ್ತರಿಸಿ ಸುತ್ತಲೂ ನೀಂಟಿಸಿದನು. ತಲೆ ಮಗ್ಗುಲಲ್ಲಿ ಜಾಲಕೊರತಿ ಇಟ್ಟುಹೋದ ಓಲೆಯ ಕಟ್ಟುಗೋಚರಿಸಿತ್ತು. ಅದನ್ನೆತ್ತಿ ಉದ್ವೇಗಾತುರನಾಗಿ ಕಟ್ಟು ಬಿಚ್ಚಿದನು. ಓದುತ್ತಿದ್ದಂತೇ ಅವನ ಕಂಗಳಿಂದ ಕಂಬನಿ ಸುರಿಯಿತು.

"ಹಾ! ನಾನು ಭಾಷೆಕೊಟ್ಟುಹೋದ ಮೇಲೆ ಭಾಷೆ ತಪ್ಪಿದರೆ ಹೇಗೆ? ನಾನಿಂದು ಜಾತಿಯಲ್ಲಿ ಮೇಲಾದರೂ, ಜಾತಿಯಲ್ಲಿ "ಬೈರ" (ಭಯಂಕರ) ಅವನಲ್ಲವೇ? ಅವನಿಗೆ ಕೊಟ್ಟ ವಚನವನ್ನು ಮುರಿಯುದಕ್ಕೆಂತು ಸಾಧ್ಯ?"

ಇರ್ಕಟ್ಟಿನ ಸ್ಥಿತಿಯಲ್ಲಿ ಬಿದ್ದು ಪಡ್ಡೆಲ ಮರುಮರುಗಿದನು.

ಬೆಳ್ಳಂ ಬೆಳಗಾಯಿತು. ಅಷ್ಟರಲ್ಲಿ ಸೇವಕರು ಸೆರೆಮನೆಯೊಳಗೆ ಬಂದರು. ನತದೃಷ್ಟನಾಗಿ ಒಂದೇ ಸವನೆ ಕಣ್ಣೀರು ಧಾರೆ ಸುರಿಸುತ್ತಿದ್ದ ರಾಜಭಾರಿ ಪಡ್ಡೇಲನನ್ನುದ್ದೇಶಿಸಿ ಅವರು ಹೀಗೆದರು:

"ನೀವು ವೃಥಾ ಏಕೆ ದುಃಖಿಸುತ್ತಿರುವಿರಿ? ನಿಮಗೆ ಒಂದು ಭಾಷೆಕೊಡಬಾರದೇ?"

ಪಡ್ಡೆಲ ತೊದಲಿದನು:

"ಅಹುದು!... ಭಾಷೆ!.... ಅಯ್ಯಮಾ! ಯಾವ ಸಂಕಟವನ್ನಾದರೂ ತಾಳಬಹುದು; ಆದರೆ ಈ ದಿಂಡೆ ಸಂಕಲೆಯ ಸೆರೆಯಲ್ಲಿ ಚಿತ್ರಹಿಂಸೆ ಪಟ್ಟು ಸವೆಯಲಾರೆನು."

"'ಅಹ್ಲ!' ಹಾಗಾದರೆ ನೀವು ಭಾಷೆ ಕೊಡುವಿರಾ?"

"ಭಾಷೆಕೊ....ಡು....ತ್ತೇ....ನೆ."

ತಕ್ಷಣ ಸೇವಕರು ಧಾವಿಸಿ ಮಂಗರದರಸನ ಬಳಿ ಸಾರಿ, ಅತನನ್ನು ಸೆರೆಮನೆಗೆ ಕರೆದುಕೊಂಡು ಬಂದರು.

ಆಶಾತುರವಿಷ್ಟನಾಗಿಕೊಂಡ ಮಂಗರದರಸ ಕೇಳಿದನು:

"ಏನು ಪಡ್ಡೆಲಾ? ಭಾಷೆಕೊಡುವೆಯಾ? ನೆಂಟಸ್ತಿಕೆ ಹಿಡಿಯುವೆಯಾ? ಕೊಡು; ನಿನ್ನನ್ನು ತಕ್ಷಣ ಬಿಡುಗಡೆ ಮಾಡುವೆನು."

"ಕೊಡುತ್ತೇನೆ. ನನ್ನನ್ನೊಮ್ಮೆ ಬಿಡಿರಿ."

ಮಂಗರದರಸ ಪಡ್ಡೆಲನನ್ನು ಬಂಧಮುಕ್ತಗೊಳಿಸಿ ತನ್ನ ಅರಮನೆಯ ಚಾವಡಿಗೆ ಕರೆದುಕೊಂಡು ಬಂದನು. ಪಡ್ಡೆಲನಿಗೆ ಕುಳಿತುಕೊಳ್ಳಲು ಉಚಿತಾಸನವನ್ನು ಕೊಟ್ಟು, ತಾನು ಸೆಳೆಮಂಚದಲ್ಲಿ ಆಸೀನನಾದನು.

"ಭಾವಾ! ಹೆಣ್ಣು ಕೊಡುವಿರಲ್ಲಾ? ನೆಂಟಸ್ತಿಕೆ ಹಿಡಿಯುವಿರಲ್ಲಾ?"

"ಕೊಡುತ್ತೇನೆ. ಆದರೆ ಯಾವುದಕ್ಕೂ ನನ್ನ ಪ್ರಕೃತಿಯು ಈಗ ಸಾನುಕೂಲವಿಲ್ಲ. ನಾನು ಮನೆಗೆ ಹೋಗಿ ಮೈಯ ಕೊಳೆಗೆ ಮಿಂದು, ಹೊಟ್ಟೆಯ ಹಸಿವಿಗೆ ಎರಡು ತುತ್ತು ಉಣ್ಣುವೆನು. ಸಂಜೆಗೇ ಹಿಂತಿರುಗಿ ಬರುತ್ತೇನೆ."

"ಆದೀತು; ಈಗ ಮನೆಗೆ ಹೋಗಿರಿ. ಸಂಜೆಗೆ ತಪ್ಪದೇ ಬಂದು ನೆಂಟಸ್ತಿಕೆ ನಿಜಮಾಡಿ ಹೋಗಿರಿ."

o o o o

ಪಡ್ಡೆಲ ತನ್ನ ರಾಜಭಾರಿ ಬೀಡಿಗೆ ಆಗಮಿಸಿದನು. ಬಂದವನೇ ಮಿಂದು ಊಟಮಾಡಿದನು.

"ದೇಶಭಾರಿ ಬೀಡಿನ ವರೆಗೆ ಹೋಗಿ ಬರುತ್ತೇನೆ" ಎಂದು ಆ ಮೇಲೆ ತನ್ನ ಹೆಂಡತಿ ಮಾನಿಪ್ಪೋಲೆದಿಗೆ ನುಡಿದು ಹೊರಹೊರಟನು.

ದೇಶಭಾರಿ ಬೀಡಿಗೆ ಬಂದನು. ತಂಗಡಿ ತಟ್ಟುಗಳನ್ನು ಸಂದರ್ಶಿಸಿದನು ತಂಗಡಿ ತಟ್ಟುಗ ದುಃಖಭಾವದಿಂದ ಸಿರಿಮುಡಿ ತಗ್ಗಿಸಿ ಸಜಲನೇತ್ರೆಯಾಗಿ ಕೂತುಕೊಂಡಿದ್ದಳು. ಪಡ್ಡೆಲ ನುಡಿದನು:

"ತಂಗೀ, ಬಾಡಿದ ಮಲ್ಲಿಗೆಯಂತೆ ಸೊರಗಿದ್ದಿಯಲ್ಲಾ? ನಿನ್ನನ್ನು ನೋಡುವಾಗ—ಹಾ! - ನನ್ನ ಕರುಳು ಹಿಡಿದಂತಾಗುತ್ತಿದೆ. ತಂಗೀ, ನೀನು ಬರೆದ ಓಲೆಯ ಪ್ರಕಾರ ಮಂಗರದರಸನಿಗೆ ಭಾಷೆಕೊಟ್ಟು ಬಂದೆನು. ಈ ಭಾಷೆಯನ್ನು ನಾನು ಹೇಗೆ ಮುರಿಯಲಿ?"

ತಂಗಿಗೆ ನಡೆದಂಥ ಘಟನೆಯನ್ನೆಲ್ಲ ಸಾದ್ಯಂತವಾಗಿ ನಿರೂಪಿಸಿದನು.

ತಂಗಡಿ ತಟ್ಟುಗ ಕುಗ್ಗಿದ ಧ್ವನಿಯಿಂದ ಗದಗದಿಸಿದಳು:

"ಅಣ್ಣಾ! ನಿಮ್ಮ ಆಗಮನವೆಂತಾಗುವುದೆಂಬ ಒಂದೇ ಚಿಂತೆಯಿಂದ ನಾನು ಕಾತರಿಸಿಕೊಂಡು ದಾರಿ ನೋಡುತ್ತಿದ್ದೇನೆ. ನೀವು ಬಂದಿರಿ, ಇನ್ನು ನಿಮ್ಮ ಭಾಷೆ.......?"

"ಅಹುದು, ಭಾಷೆ! ನೆಂಟಸ್ತಿಕೆ ನಿಜಮಾಡುವರೆ ಅತನಿಂದು ಸಂಜೆ ನನ್ನನ್ನು ಕರೆದಿದ್ದಾನೆ. ಜಾತಿಯಲ್ಲಿ ನಾವು ಮೇಲಾದರೂ ದುಡ್ಡಿನಲ್ಲಿ ಅವನು ಬಲಾಢ್ಯ, ಮಹಾ ಅರಸ್ಥಾನದವ. ನಾನು ಹೇಗೆ ಭಾಷೆ ತಪ್ಪಲಿ, ಮಗಳೇ?"

"ಹೋಗುವ ಹಾಗೆ ಹೋಗಿ ನೆಂಟಸ್ತಿಕೆ ನಿಜಮಾಡಿ ಮದುವೆಗೆ ದಿನವಿಡಿರಿ. ರಾಜಭಾರಿ ಬೀಡಿಗೆ ಬರುವ ಗುರುವಾರ ದಿಬ್ಬಣ ತರಲಿಕ್ಕೆ ಹೇಳಿ. ಬಳಿಕ ನೆಟ್ಟಗೇ ನಿಮ್ಮ ದಾರಿಯನ್ನು ನೀವು ಹಿಡಿದು ಎಲ್ಲಿಗಾದರೂ ಹೋಗಿ ತಲೆಮರೆಸಿಕೊಳ್ಳಿರಿ; ಜನದೃಷ್ಟಿಗೆ ಬೀಳದಂತೆ ಏಕಾಂತವಾದ ಗುಪ್ತ ಸ್ಥಳದಲ್ಲಿ ಅವಿತುಕೊಳ್ಳಿರಿ. ಇಷ್ಟು ಮಾಡಿರಿ ಮಿಕ್ಕೆಲ್ಲ ಕೆಲಸವನ್ನು ನಾನು ನಿಭಾಯಿಸುತ್ತೇನೆ."

ರಾಜಭಾರಿ ಪಡ್ಡೆಲ ತಂಗಿಯನ್ನು ಬರಸೆಳೆದು ಅಪ್ಪಿದನು. ಆ ದೃಶ್ಯವು ಹೃದಯಸ್ಪರ್ಶಿಯಾಗಿತ್ತು. ತಂಗಿಯನ್ನು ಬೀಳ್ಕೊಟ್ಟು ಮಾನಿಮಂಗರದರಮನೆಗೆ ನಡೆದನು.

ರಾಜಭಾರಿ ಪಡ್ಡೆಲನನ್ನು ಕಾಣುತ್ತಲೇ ಚಾವಡಿಯ ತೂಗುಯ್ಯಾಲೆಯಲ್ಲಿ ಕೂತಿದ್ದ ಮಂಗರದರಸು ಎದ್ದು, ಬಂದಂತಹ ಪಡ್ಡೆಲನಿಗೆ ಅತ್ಯಾದರವನ್ನು ಪ್ರದರ್ಶಿಸುತ್ತ ತೂಗುಯ್ಯಾಲೆಯಲ್ಲಿ ತನ್ನ ಮಗ್ಗಲಲ್ಲಿ ಕೂತುಕೊಳ್ಳಿಸಿದನು.

"ಭಾವಾ ಸಂಜೆಗೆ ಬರುತ್ತೇನೆಂದು ಬೆಳಗ್ಗೆ ಹೇಳಿಹೋದರೂ ನೀವು ಒಂದು ಹೆಜ್ಜೆ ಮುಂದೆಯೇ ಇದ್ದೀರಲ್ಲದೆ ಹಿಂದಿಲ್ಲ. ಏನೂ— ಹೆಣ್ಣು ಕೊಡುವಿರಲ್ಲಾ? ನೆಂಟಸ್ತಿಕೆ ಹಿಡಿಯುವಿರಲ್ಲಾ?"

"ಹೆಣ್ಣು ಕೊಡುತ್ತೇನೆ. ನೆಂಟಸ್ತಿಕೆ ಹಿಡಿಯುತ್ತೇನೆ."

"ನಮ್ಮೊಳಗೆ ನೆಂಟಸ್ತಿಕೆ ಗಟ್ಟಿಮಾಡುವಾ. ವ್ಯರ್ಥವಾಗಿ ಹೊತ್ತುಗೆಡಿಸುವುದೇತಕ್ಕೆ?"

"ಈ ಗುರುವಾರವಲ್ಲ, ಬರುವ ಗುರುವಾರ ರಾಜಭಾರಿ ಬೀಡಿಗೆ ದಿಬ್ಬಣ ತನ್ನಿರಿ."

"ಸೈ! ಅಂತಹ ಸೊಗಸುಮಾಡಿದಿರಿ. ಇನ್ನು ಪಂಚಮುಹೂರ್ತದ ಊಟವಾಗಬೇಕಷ್ಟೆ? ಸಿದ್ಧಮಾಡುವುದಕ್ಕೆ ಒಳಗೆ ಹೋಗಿ ಹೇಳಬರುತ್ತೇನೆ."

"ಬೇಡ; ಪಂಚಮುಹೂರ್ತದ ಊಟ ಅಗತ್ಯವಿಲ್ಲ. ನಮ್ಮ ಜಾತಿಸಂಪ್ರದಾಯ

ವಯಸ್ಸಾದುದಕ್ಕೆ ಬಹಿಷ್ಕಾರ!

"ಇಪ್ಪತ್ತನಾಲ್ಕು ವರ್ಷ ತುಂಬಿದರೂ, ಮದುವೆಯಾಗಿಲ್ಲ?"—ಎನ್ನುತ್ತ, ನಿರಪರಾಧಿ ಹೆಣ್ಣು ಮದಿರಬ್ಬೆಗೆ ಊರಿನ ಜನರು ಬಹಿಷ್ಕಾರ ಹಾಕಿದರು. ಹೂ-ಸೀರೆಗಳನ್ನಿತ್ತು ತಾಳಿಬಂಧಿ ಕಟ್ಟಿಸಿದ ಕದಿರೆಯ ಎಂಕಪ್ಪ ಪೆರ್ಗಡೆ, ಮದುವೆ ಮಾತು ಬಂದಾಗ, ನಿರಾಕರಿಸಿ, 'ಆ ಹೆಣ್ಣನ್ನು ಕಣ್ಣುಕಟ್ಟಿ ಕಾಡಿಗೆ ಬಿಡಿರಿ!' ಎಂದೊದರಿದನು.

ತಂದೆ ಕೋಚನಾಳುವ, ಸಮಾಜದ ಛೀಮಾರಿ ಸಹಿಸಲಾರದೆ, ಚೆಲುವೆ ಮದಿರಬ್ಬೆಯನ್ನು ಕಾಡಿಗೊಯ್ದು ಬಿಟ್ಟನು!

ಕಾಡಿನಲ್ಲಿ ಮದಿರಬ್ಬೆಯ ಗತಿಯೇನಾಯಿತು?

ತುಳುಸಂಧಿಯ ಕಥೆಗಳಲ್ಲಿ 33ನೆಯದಾದ "ಮಧುರದಾಂಪತ್ಯ"–ಇದನ್ನು "ಪ್ರಭಾತ"ದ ಮುಂದಿನ ವಾರದ (ತಾ. 22—7—62) ಸಂಚಿಕೆಯಲ್ಲಿ ಓದಿರಿ

ಪ್ರಕಾರ ಇಕ್ಕಡೆಯವರು ಎಲೆಅಡಿಕೆ ವಿನಿಮಯಿಸಿಕೊಂಡರೆ ತೀರಿತು.

ಮಂಗರದರಸನ ಕಡೆಯ ನಾಲ್ಕು ಮಂದಿ ಮತ್ತು ಪಡ್ಡೈಲ ಇದ್ದು—ಹೀಗೆ ವರನ ಮತ್ತು ಹೆಣ್ಣಿನ ಕಡೆಗಳಿಂದ ಪರಸ್ಪರ ತಾಂಬೂಲ ವಿನಿಮಯ ಕ್ರಮ ನಡೆಯಿತು.

"ಮಾತಿನಲ್ಲಿ ಹೆಚ್ಚು ಕಮ್ಮಿ ಇಲ್ಲ. ಮಾತಿನಲ್ಲಿ ಏರು ಪೇರು ಬರಲಿಕ್ಕೆ ಕೂಡದು" ಎಂದು ಇಕ್ಕಡೆಯವರು ವಚನ ನೀಡಿದರು.

ಎಲ್ಲರೂ ಕೂಡಿ ನಿಶ್ಚಯದ ತಾಂಬೂಲ ತಿಂದರು. ಪಡ್ಡೈಲ ಹೊರಡುವುದಕ್ಕೆ ಮೇಲೆದ್ದನು.

"ಭಾವಾ, ಒಂದು ಗಿಂಡೆ ನೀರು ಕುಡಿದು ಹೋಗಿರಿ" ಎಂದು ಮಂಗರದರಸ ಬೆಸಗೊಂಡನು.

"ಇಲ್ಲ; ನನಗೆ ಬಾಯಾರಿಕೆಯಾಗುತ್ತಿಲ್ಲ. ನಾನು ಮೈಯ ಕೊಳೆಗೆ ಮಿಂದು, ಹೊಟ್ಟೆಯ ಹಸಿವಿಗೆ ಪುಸ್ಕಳ ಉಂಡು ಬಂದೆ. ಸದ್ಯಕ್ಕೆ ನೀರು ನನಗೆ ಬೇಡ. ನಾನು ಹೋಗುತ್ತೇನೆ. ಮದುವೆಯ ಸನ್ನಾಹವಾಗಬೇಕಲ್ಲಾ?"—ಹೀಗೆ ನುಡಿದು ಪಡ್ಡೈಲ ಅರಮನೆಯಿಂದ ಇಳಿದು ಹೊರಟುಬಿಟ್ಟನು.

ರಾಜಭಾರಿ ಬೀಡಿಗೆ ಬಂದು ತನ್ನ ಹೆಂಡತಿ ಮಾನಿಪೋಲೆದಿಗೆ ಎಲ್ಲಾ ಸಂಗತಿಯನ್ನರುಹಿ, ಈ ರೀತಿ ಕಟ್ಟಪ್ಪಣೆಯನ್ನು ಮಾಡಿದನು:

"ನಿನ್ನ ಅಣ್ಣನಾದ ಇನ್ನೋಡಿನ ದೊರೆ ಮತ್ತು ಮಾನಿಮಂಗರದರಸ ಅತಿ ಮಿತ್ರ ಜೋಡಿಗಳಾಗಿರುತ್ತಾರೆ. ನಿನ್ನ ಪ್ರೀತಿಯ ಅಣ್ಣನು ಬಂದು ನನ್ನನ್ನು ವಿಚಾರಿಸಬಹುದು. ನನ್ನ ಗೊತ್ತು ನೆಲೆಯನ್ನು ಮಾತ್ರ ಅವನಿಗೆ ತಿಳಿಸಬೇಡ. ನಾನು ಉಚ್ಚಿಲದ ಕಾಡಿಗೆ ಹೋಗುತ್ತೇನೆ. ನೀನು ದಿನಕ್ಕೊಂದಾವರ್ತಿ ಅಲ್ಲಿಗೆ ಬಂದು ಒತ್ತರ್ತು ಅನ್ನವನ್ನು ನನಗೆ ಕೊಟ್ಟು ಹೋಗುತ್ತಿರು."

"ಅಯ್ಯೋ ನಿಮ್ಮ ಕಷ್ಟವೇ! ಆ ಮಂಗರದರಸನಿಗೆ ಇದ್ದಕ್ಕಿದ್ದ ಹಾಗೆ ಒಂದು ಮಾರಿ ಕೂಡ ಬಡಿದು ಮರಣ ಬರುವುದಿಲ್ಲವೇ!............ಹಾ! ನಾನು ಅಲ್ಲಿಗೆ ಎಲ್ಲಿಗೆಂತ ಬರಲಿ, ನನ್ನ ದೇವರೇ! ಮತ್ತು ನಾನು ಬಂದ ಸಂಕೇತ ನಿಮಗೆ ಹೇಗೆ ಗೊತ್ತಾಗುವುದು?" ಎಂದು ಹೆಂಡತಿ ಗದ್ಗದಿತ ಕಂಠದಿಂದ ಮಿಡುಕಾಡಿದಳು.

"ಕಾಲಿನ ತುಳಿತಕ್ಕೆ ಎಲ್ಲಿ ಮಣ್ಣು ಹೆಚ್ಚು ಜಗ್ಗುತ್ತದೆಯೋ, ಆ ಕಡೆಗೆ ಬಾ. ಧಾರೆಗೆ ಹಾಕಿದ ನಿನ್ನ ಕಾಲುಂಗುರದ ಶಬ್ದವನ್ನಾಲಿಸಿ ನಾನು ನಿನ್ನ ಆಗಮನವನ್ನು ಖಚಿತಮಾಡಿಕೊಳ್ಳುವೆನು. ನನ್ನ ಮುದ್ದೂ! ಜೋಕೆ, ಜಾಗ್ರತೆಯಲ್ಲಿರು. ನಾನು ಬರುತ್ತೇನೆ."

ಹೋಗುತ್ತಿರುವ ಗಂಡನನ್ನು ಮಾನಿಪೋಲೆದಿ, ಅವಿರಳಧಾರೆಯಾಗಿ ಕಣ್ಣೀರು ಇಳಿಯುತ್ತಿರುವ ತನ್ನ ಕಂಗಳಿಂದ ಅವನ ತಲೆಕುದಿ ಮಾಸುವ ತನಕ ಹೆಬ್ಬಾಗಿಲಿನಲ್ಲಿ ನಿಂತು ಪ್ರತೀಕ್ಷಿಸಿದಳು.

o o o o

ಹಾ ಹಾ ಅನ್ನುವುದರೊಳಗೆ ಲಗ್ನದ ಗುರುವಾರ ಬಂತೇ ಬಂತು! ಮಂಗರದರಸನ ದಿಬ್ಬಣವೂ ಬಂತು. ರಾತ್ರಿ ಕಾಲ! ಆನೆ, ಕುದುರೆ, ತಾಲೀಮು, ಸಿಡಿಮದ್ದು, ಬ್ಯಾಂಡು, ವಾಲಗ, ಬಣ್ಣ ಬಣ್ಣ ದೀಪಗಳು—ಸಡಗರವೇ ಸಡಗರ! ಸರ್ವಾಲಂಕಾರಭೂಷಿತನಾಗಿ ವರನಾದ ಮಂಗರದರಸ ಆನೆಯ ಮೇಲೆ ಅಂಬಾರಿ ಹಾಕಿ, ವಿರಾಜಮಾನನಾಗಿದ್ದಾನೆ!

ಆದರೆ ರಾಜಭಾರಿ ಬೀಡಿನಲ್ಲಿ ಏನಂತೆ? ದೇಶಭಾರಿ ಬೀಡಿನಿಂದ ತಂಗಡಿ ತಟ್ಟುಗ ಆಗಮಿಸಿ ಇಲ್ಲಿ ದಿಬ್ಬಣದ ಸ್ವಾಗತಕ್ಕೆ ಅಭೂತಪೂರ್ವಕವಾದ ಮಾರಕ ಸನ್ನಾಹವನ್ನೆ ವ್ಯವಸ್ಥೀಕರಿಸಿ ತನ್ನ ಸ್ವಸ್ಥಾನಕ್ಕೆ ಮರಳಿದ್ದಳು!

ಹುಣಸೆ ಸಪ್ಪಿನ ಚಪ್ಪರ! ಚಪ್ಪರದಿಂದ ಬಾಕಿಮಾರಿನ ಉದ್ದಕ್ಕೂ ದಾರಿಯ ಮೇಲೆ ನೆಲ್ಲಿಕಾಯಿ ಹರಡಿಸಿ, ಅದರ ಮೇಲೆ ಚಾಪೆಗಳನ್ನು ಹಾಸಲಾಗಿತ್ತು! ಬೀಡಿನ ಚಾವಡಿಯಲ್ಲಿ ಒಂದು ಮಿಣುಕಲು ದೀಪವನ್ನು ಹಚ್ಚಿಸಿಡಲಾಗಿತ್ತು!

ಮಂಗರದರಸನ ದಿಬ್ಬಣ ಪಟಾಟೋಪವಾಗಿ ಬಾಕಿಮಾರಿಗೆ ಇಳಿದು, ಚಪ್ಪರಕ್ಕೆ ಮುಂದುವರಿದಂತೆಲ್ಲ-ಆನೆ, ಕುದುರೆ, ಜನಮಂದೆ, ದೀಪಧಾರಿಗಳೆಲ್ಲರೂ ನೆಲದ ಮೇಲೆ ಉರುಳಿಕೊಂಡರು! ಒಬ್ಬರಮೇಲೊಬ್ಬರು ಮುಗ್ಗರಿಸಿ ಬಿದ್ದರು. ಆನೆ ಕುದುರೆಗಳು ನಿಯಂತ್ರಣ ತಪ್ಪಿ ಎಡವುತ್ತ ತಡವುತ್ತ ಮನಬಂದಂತೆ ಓಡತೊಡಗಿದವು! ಕೂಗು! ಕಿರಿಚಾಟ! ಅಯ್ಯೋ! ಕುಯ್ಯೋ! ಕೋಲಾಹಲವೇ ಕೋಲಾಹಲ!! ಅನೇಕರ ಕಾಲು ಮುರಿಯಿತು. ಹಲವರ ಕೈ ತುಂಡಾಯಿತು, ಇನ್ನು ಕೆಲವರ ಸೊಂಟ ಸೋಬಾನೆಯಾಯಿತು! ವರಮಹಾಶಯನಾದ ಮಂಗರದರಸು ನಜ್ಜುಗುಜ್ಜಾಗಿ ಒಂದು ಕಡೆ ಹೊರಳಿಕೊಂಡಿದ್ದನು! ಒಂದು ಕ್ಷಣದಲ್ಲಿ ಏನೆಲ್ಲಾ ಅನರ್ಥಪರಂಪರೆಗಳು ಸಂಭವಿಸಿಕೊಂಡಿತು!

ಮಂಗರದರಸನನ್ನು ದಿಬ್ಬಣಿಗರಲ್ಲಿ ಯಾರೋ ಎತ್ತಿಕೊಂಡರು, ಅವನ ಸಮೇತ ಅಳಿದುಳಿದ ದಿಬ್ಬಣಿಗರು ಹಿಂದಕ್ಕೆ ಕಂಬಿಕಿತ್ತರು. ಬಂದ ಹಾಗೇ ಹಿಂದೆ ಹೋಗು ಸುಬ್ಬರಾಯ ಎನ್ನುವ ಗಾದೆಯಂತೆ ಬಂದ ದಿಬ್ಬಣ ವಾಪಾಸಾಯಿತು!

o o o o

ತನ್ನ ಮಾನಿಮಂಗರದ ಅರಮನೆಯನ್ನು ಸೇರಿದ ಮಂಗರದರಸ ಒಂದೆಡೆ ತೀವ್ರ ಮೈನೋವು, ಮತ್ತೊಂದೆಡೆ ರಾಜಭಾರಿ ಪಡ್ಡೈಲನ ಮೇಲಿನ ಕೋಪಭರಸ-ಇವುಗಳಿಂದ ಕೆಣಕಲ್ಪಟ್ಟವನಾಗಿ ಚಿತ್ತಕ್ಷೋಭೆಪಟ್ಟನು. ಪಡ್ಡೈಲನನ್ನು ಹಿಡಿದು ತನ್ನ ವೈರಸಾಧನೆಯನ್ನು ಪೂರೈಸಿಕೊಳ್ಳುವ ಉಪಾಯವೆಂತೆಂಬುದನ್ನು ಪರ್ಯಾಲೋಚಿಸತೊಡಗಿದನು.

ತನ್ನ ಗೆಳೆಯನಾದ ಇನ್ನೋಡಿನ ಬೀಡಿನ ದೊರೆಗೆ ಕರೆಕಳುಹಿಸಿದನು. ಇನ್ನೋಡಿನ ದೊರೆ ಆಗಮಿಸಿದನು. ಅವನ ಮುಂದೆ ದೂರುಕೊಟ್ಟನು. ರಾಜಭಾರಿ ಪಡ್ಡೈಲ ತನಗೆ ಎಸಗಿದ ದ್ರೋಹಾಚರಣೆ ಮತ್ತು ಅಪಮಾನಗಳನ್ನು ಹೇಳಿಕೊಂಡನು. ಮುಂದರಿಯುತ್ತ ಈ ರೀತಿ ಹೇಳಿದನು:

"ನೀನು ನನ್ನ ಆಪ್ತ ಮಿತ್ರನಾಗಿರುತ್ತಿ. ನನ್ನ ಅಪಮಾನ ನಿನ್ನ ಅಪಮಾನ! ರಾಜಭಾರಿ ಪಡ್ಡೈಲ ನಿನಗೆ ಭಾವನಾದರೇನಾಯಿತು? ಅವನು ನನಗೆ ಇಂತಹ ಅನ್ಯಾಯವನ್ನು ಮಾಡಬಹುದೇ? ಮಿತ್ರಾ, ನೀನೇ ಆಲೋಚಿಸು. ನಿನಗೆ ಅವನ ವರ್ತನೆಯು ಸರಿಕಾಣುತ್ತದೆಯೇ? ನಾನಂತೂ ಸಹಿಸಲಾರೆನು. ನನ್ನ ಮನದ ಸೇಡನ್ನು ಅವನಿಗೆ ಸಂದಾಯಿಸದೆ ಬಿಡಲಿಕ್ಕಿಲ್ಲ. ಮಿತ್ರಾ, ಕೇಳು! ನೀನು ಅವನ ರುಂಡವನ್ನು ಚೆಂಡಾಡಿಕೊಂದೆಯಾದರೆ ನಿನಗೆ ಕಳಸಿಗೆ ತುಂಬ ಲಪ್ಪು ಚಿನ್ನವನ್ನೂ, ಎರಡಡಿ ಭೂಮಿಯನ್ನೂ ಇನಾಮುಕೊಡುವೆನು. ಏನು-ಮಾಡುವೆಯಾ?"

ಮಹಾಪ್ರಲೋಭಿಯೂ, ಭೋಗಾಪೇಕ್ಷೆಯುಳ್ಳವನೂ ಆದ ಇನ್ನೋಡಿನ ದೊರೆ ಹಿಂದುಮುಂದು ನೋಡದೆ ತಕ್ಷಣ ಉತ್ತರಿಸಿದನು:

"ಅರಸರೇ, ನೀವು ನಿಶ್ಚಿಂತರಾಗಿರಿ. ಅಂತಹ ಉಚ್ಚನನ್ನು ಭೂಮಿಯಲ್ಲಿ ಇಡಬಾರದು. ಸೈ! ಪಡ್ಡೈಲನ ಶಿರಚ್ಛೇದವನ್ನು ಮಾಡುವೆನು. ಬರುತ್ತೇನೆ."

ಇನ್ನೋಡಿನ ದೊರೆ ಅಲ್ಲಿಂದೆದ್ದು ನೇರಾಗಿ ರಾಜಭಾರಿ ಬೀಡಿಗೆ ತೆರಳಿದನು.

o o o o

ರಾಜಭಾರಿ ಪಡ್ಡೈಲ ಉಚ್ಚಿಲದ ಕಾಡಿನಲ್ಲಿ—ಒಂದು ಗುಪ್ತವಾದ ಸ್ಥಳದಲ್ಲಿ—ಸುರಂಗವನ್ನಗೆದು, ಹೊರಗೆ ಹಲಗೆಯನ್ನು ಹಾಸಿ, ಅದರ ಮೇಲೆ ತರಗೆಲೆಗಳನ್ನು ಹರವಿ ಅದರೊಳಗೆ ಅಡಗಿ ಕೂತುಕೊಂಡು ಮರೆಯಾಗಿದ್ದನು. ಪ್ರತೀದಿನ ಒಂದಾವರ್ತಿ ಮಾನಿಪೋಲೆದಿ ಅನ್ನದ ಬುತ್ತಿಯನ್ನು ಹಿಡಿದುಕೊಂಡು ಯಾರಿಗೂ ಕಾಣದ ಹಾಗೆ ಅಲ್ಲಿಗೆ ಬರುತ್ತಿದ್ದಳು. ಪಡ್ಡೈಲ ಅವಳು ನಡಕೊಂಡು ಬರುವಾಗ ಉಂಟಾಗುತ್ತಿರುವ ಕಾಲುಂಗುರದ ಸಂಕೇತವನ್ನಾಲಿಸಿ ಗುರುತಿಸುತ್ತಿದ್ದನು. ಸುರಂಗದೊಳಗಿಂದ ತಲೆಯನ್ನು ಹೊರಗೆ ಎತ್ತರಿಸಿ ಅನ್ನದ ಬುತ್ತಿಯನ್ನು ಅವಳ ಕೈಯಿಂದ ಸ್ವೀಕರಿಸುತ್ತಿದ್ದನು. ಮಾತಿಲ್ಲ—ಸೊಲ್ಲಿಲ್ಲ. ಮತ್ತೆ ತೆಪ್ಪಗೇ ತನ್ನ ಬಿಲದೊಳಗೆ ನುಸುಳಿಕೊಂಡು ಬಿಡುತ್ತಿದ್ದನು. ಪೋಲೆದಿ ಹೊರಳಿಕೊಳ್ಳುತ್ತಿದ್ದಳು.

o o o o

ಇನ್ನೋಡಿನ ದೊರೆ ರಾಜಭಾರಿ ಬೀಡಿಗೆ ಬಂದನು. ತಂಗಿ ಮಾನಿಪೋಲೆದಿಯ ಸಂಗಡ ಮೃದುಮಧುರವಾಗಿ ಮಾತಾಡಿದನು. ಅವಳ ಗಂಡ—ತನ್ನ ಭಾವ—ರಾಜಭಾರಿ ಪಡ್ಡೈಲ ಎಲ್ಲಿಗೆ ಹೋಗಿದ್ದಾನೆಂದು ವಿಚಾರಿಸಿದನು.

ಮಾನಿಪೋಲೆದಿ ಏನೂ ಅರಿಯದವಳಂತೆ ನಟಿಸಿಕೊಳ್ಳುತ್ತ, ತನ್ನ ಗಂಡ ಎಲ್ಲಿಗೆ ಹೋಗಿದ್ದಾರೆಂಬ ಸುಳಿವೇ ತನಗೆ ಗೊತ್ತಿಲ್ಲವೆಂಬುದಾಗಿ ಅತಿಗಳೆದಳು. ತಂಗಿಯ ಬಾಯಿಂದ ಗುಟ್ಟನ್ನು ಹೊರಗೆಡಹುದಕ್ಕೆ ಆ ಕುಹಕಿಯು ಪರಿಪರಿಯ ಯುಕ್ತಿಕ ಮಾತುಗಳಿಂದ ಪ್ರಯತ್ನಿಸಿ ನೋಡಿದರೂ ಏನೂ ನಡೆಯದಾಯಿತು. ಆತ ಹತಾಶನಾಗಿ ಬಳಿಕ ರಾಜಭಾರಿ ಬೀಡನ್ನು ತೊರೆದು ಎತ್ತಲೋ ಹೋಗಿ ಕಣ್ಮರೆಯಾದನು.

ಅಣ್ಣನು ಬಂದು ಹೋದ ಮಾರಣೇ ದಿನ ಬೆಳಗ್ಗೆ ಮಾನಿಪೋಲೆದಿ ಅನ್ನದ ಬುತ್ತಿಯನ್ನು ತನ್ನ ಗಂಡನಿಗೆ ಎಂದಿನಂತೆ ಎತ್ತಿಕೊಂಡು ಉಚ್ಚಿಲದ ಕಾಡಿಗೆ

ಹೋದಳು. ತನ್ನನ್ನು ಅಣ್ಣನು ಅನುಸರಿಸಬಹುದೆಂಬ ಶಂಕೆ ಅವಳ ಮನಪಟಲದಲ್ಲಿ ಸುಳಿಯದೇ ಇರಲಿಲ್ಲ. ಅದು ಕಾರಣ ಹೆದರುತ್ತ ಅಳುಕುತ್ತ ಹಿಂದೆ ಮುಂದೆ ಸುತ್ತ ಮುಗ್ಗಲು ನೋಡುತ್ತ ಬುತ್ತಿಯನ್ನು ಪಡ್ಡಿಲನು ಅಡಗಿದ್ದ ಸುರಂಗಕ್ಕೆ ತಂದು ಅವನಿಗೆ ಕೊಟ್ಟು ಮಿಣ್ಣನೇ ಹಿಂದಕ್ಕೆ ಮರಳಿದಳು.

ಅದರ ಮರುದಿನ ಹೊತ್ತು ತಪ್ಪಿಸಿ ದಾರಿ ಬದಲಿಸಿ ಮಧ್ಯಾಹ್ನ ಹೋಗಿ ಕೊಟ್ಟು ಬಂದಳು.

ಮಹಾಕಾರ್ಯ ಕುಶಲನಾದ ಕನೋಜಿ—ಇನ್ನೋಡಿನ ದೊರೆ—ಮಾನಿಪೋಲೆದಿಯನ್ನು ಅವಳಿಗರಿಯದ ಹಾಗೆ ಅನುಸರಿಸಿಕೊಂಡು ಈ ಎರಡು ದಿವಸಗಳಲ್ಲಿಯೂ ಬಂದಿದ್ದನು. ಆದರೆ ಅವನಿಗೆ ಪಡ್ಡಿಲನು ಅವಿತುಕೊಂಡ ಸುರಂಗದ ಸರಿಯಾದ ದಿಕ್ಕು ತಾವನ್ನು ಕಂಡು ಹಿಡಿಯಲು ಶಕ್ಯವಾಗದೇ ಹೋಯಿತು.

ಮೂರನೇ ದಿನ ಮಾನಿಪೋಲೆದಿ ರಾತ್ರಿ ಮಿಣಿಮಿಣಿ ದೀಪವನ್ನು ಹಿಡಿದುಕೊಂಡು ಸಾಗಿದಳು. ಹೊಂಚುಗಾರನಾದ ಇನ್ನೋಡಿನ ದೊರೆ ಬಿಳಿ ನೇಕಟೆ ಮರದ ಮೇಲೆ ಕೂತು ಅವಳ ದಾರಿಯನ್ನು ಕಣ್ಣಲ್ಲಿ ಕಣ್ಣಿಟ್ಟು ಇದಿರುನೋಡುತ್ತಿದ್ದನು. ಅವಳನ್ನು ಕಾಣುತ್ತಲೇ ಮರದಿಂದ ಕೆಳಗಿಳಿದನು. ಅವಳ ಕಣ್ಣಿಗೆ ತನ್ನ ಸುಳಿವು ಬೀಳದಂತೆ ಸದ್ದಿಲ್ಲದೆ ಮೆತ್ತಗೆ ತೆವಳಿಕೊಂಡು ಬೆಂಬತ್ತಿದನು.

ಮಾನಿಪೋಲೆದಿ ನಿಶ್ಚಿತ ಸ್ಥಳವನ್ನು ಸೇರಿದಳು. ಪೋಲೆದಿ ಹಿಡಿದುಕೊಂಡ ಮಿಣುಕು ದೀಪದ ಮಂದ ಪ್ರಕಾಶದಲ್ಲಿ ಸುರಂಗದಿಂದ ಮನುಷ್ಯನ ತಲೆಯೊಂದು ಹೊರಬಂದು ಕೈಚಾಚಿ ಮೇಲಿಂದ ಅವಳು ನೀಡುವ ಬುತ್ತಿಯನ್ನು ತೆಕ್ಕೊಳ್ಳುತ್ತಿರುವ ಅಸ್ಪಷ್ಟ ಚಿತ್ರವನ್ನು ಅನತಿ ದೂರದ ಪೊದೆಯ ಮರೆಯಲ್ಲಿ ನಿಂತು ಇನ್ನೋಡಿನ ದೊರೆ ತುಬ್ಬುಮಾಡಿದನು.

ಮಾನಿಪೋಲೆದಿ ಹಿಂತೆರಳಿದಳು.

ಇನ್ನೋಡಿನ ದೊರೆ, ಅವಳು ಮುಂದೆ ಹೋಗಿ ಕಣ್ಮರೆಯಾಗುವ ಪರ್ಯಂತರ ಕಾದು, ಬಳಿಕ ಪೊದೆಯೊಳಗಿಂದ ಹೊರಬಂದನು. ಮುಂದೆ ಹೋಗಿ ಸುರಂಗದ ಮೇಲ್ಭಾಗದಲ್ಲಿ ಹರಡಿಕೊಂಡಿದ್ದ ತರಗೆಲೆಯನ್ನು ಆಚೀಚೆ ಸರಿಸಿ ಹಲಗೆಯನ್ನು ಸರಕ್ಕನೇ ಹಿಂದಕ್ಕೆ ಸೆಳೆದನು. ಚಂದ್ರಾಯುಧವನ್ನು ಹಿಡಿದು ಸುರಂಗದೊಳಗೆ ನುಗ್ಗಿದನು.

ಆ ಸಮಯದಲ್ಲಿ ರಾಜಭಾರಿ ಪಡ್ಡಿಲ ಬುತ್ತಿಯನ್ನು ಬಿಚ್ಚಿ ಒಂದು ತುತ್ತು ಅನ್ನವನ್ನು ಬಾಯಿಗಿಟ್ಟು, ಮತ್ತೊಂದನ್ನು ಮುಷ್ಟಿಯಲ್ಲಿ ಹಿಡಿದಿದ್ದನು. ಅಕಸ್ಮಾತ್ತಾಗಿ ಬಿಚ್ಚುಗತ್ತಿಯನ್ನು ಧರಿಸಿ ಧುಘುಂ ಪ್ರವೇಶಮಾಡಿದ ಇನ್ನೋಡಿನ ದೊರೆಯನ್ನು ಕಾಣುತ್ತಲೇ ಪಡ್ಡಿಲ ಫಕ್ಕನೇ ಬೆರಗಾಗಿ ಸ್ತಬ್ಧನಾಗಿಬಿಟ್ಟನು! ಬಾಯಿಯಲ್ಲಿದ್ದ ತುತ್ತು ಬಾಯಲ್ಲೇ! ಕೈಯಲ್ಲಿದ್ದ ತುತ್ತು ಕೈಯಲ್ಲೇ!

ಆ ಸ್ಥಿತಿಯಲ್ಲಿದ್ದಾಗಲೇ ಇನ್ನೋಡಿನ ದೊರೆ ಪಡ್ಡಿಲನ ಜುಟ್ಟನ್ನು ಹಿಡಿದು ನೆಲಕ್ಕೆ ಕೆಡವಿ ಅವನ ತಲೆಯನ್ನು ಕಡಿಯುವುದಕ್ಕೆ ತನ್ನ ಚಂದ್ರಾಯುಧವನ್ನು ಮೇಲಕ್ಕೆತ್ತಿದನು.

ಪಡ್ಡಿಲ ದೈನ್ಯಭಾವದಿಂದ ಪ್ರಾರ್ಥಿಸಿದನು:

"ಹಾ! ತಾಳು! ನನ್ನ ಮೂರು ಮಾತುಂಟು! ಬಾಯಲ್ಲಿದ್ದ ಅನ್ನದ ತುತ್ತನ್ನು ನುಂಗಿ, ಕೈಯಲ್ಲಿದ್ದ ಈ ಮತ್ತೊಂದು ತುತ್ತನ್ನು ಬಾಯಿಗೆ ಹಾಕಿ ತಿಂದುಕೊಳ್ಳುವೆನು. ಭಾವಾ, ಮತ್ತೆ ಬೇಕಾದರೆ ನನ್ನನ್ನು ಕೊಲ್ಲು, ಇಲ್ಲವೇ ಚೆಲ್ಲು!"

ಇಲ್ಲ! ಆ ನಿರ್ದಯ ಪಾಷಂಡಿ ಅದಕ್ಕೂ ಅವಕಾಶ ಕೊಡದೆ, ತನ್ನ ಚಂದ್ರಾಯುಧವನ್ನು ಬೀಸಿ ಪಡ್ಡಿಲನ ಶಿರಚ್ಛೇದ ಮಾಡಿದನು!

"ಹಾ! ಕುಂಞ!....!...."—ಈ ರೀತಿಯ ಉದ್ಗಾರವೊಂದು ಪ್ರಾಣೋತ್ಕ್ರಮಣದ ಕಾಲದಲ್ಲಿ ಪಡ್ಡಿಲನ ಬಾಯಿಂದ ಹೊರಹೊರಟಿತು!

o o o o

ಕುಂಞ! ರಾಜಭಾರಿ ಪಡ್ಡಿಲ ಕೊನೆಯ ಘಳಿಗೆಯಲ್ಲಿ ನೆನೆದು ಕರೆದ ನಾಮಾಂಕಿತ ವ್ಯಕ್ತಿಯೇ ಬಾಲೆ ಬಂಜಿನಡಿ ಕುಂಞ. ಈತನು ಪಡ್ಡಿಲನ ಅಳಿಯ; ಸ್ವಜನದ್ರೋಹಿಯೂ, ಹಂತಕನೂ ಆದ ಇನ್ನೋಡಿನ ದೊರೆಗೆ ಮದುವೆಮಾಡಿ ಕೊಟ್ಟ ಪಡ್ಡಿಲನ ತಂಗಿ ಕಂಪುಪೋಲೆಯ ಗರ್ಭಜಾತ! ಏಳು ವರುಷ ವಯಸ್ಸಿನ ಸುಕುಮಾರ!

ಇನ್ನೋಡಿನ ದೊರೆ ರಾಜಭಾರಿ ಪಡ್ಡಿಲನನ್ನು ಕೊಲೆಗೈದ ಸಮಾನಾಂತರ ವೇಳೆಯಲ್ಲಿ, ಇತ್ತ ಇನ್ನೋಡಿನ ಬೀಡಿನಲ್ಲಿ ಹಾಸಿಗೆಯ ಮೇಲೆ ಮಲಗಿದ್ದ ಬಾಲೆ ಬಂಜಿನಡಿ ಕುಂಞನಿಗೆ ಜಾಲ ಕೊರತಿ ಸ್ವಪ್ನದಲ್ಲಿ ಕಾಣಿಸಿಕೊಂಡು ಈ ರೀತಿ ಕೆಣಕಿ ಅಬ್ಬರಿಸಿತು:

"ಎಲೇ ಹುಡುಗನೇ! ಇದೆಂಥ ನಿದ್ದೆ ನಿನ್ನದು? ಹ್ಹ....ಹ್ಹಾ....ಹ್ಹಾ! ನಿನ್ನ ತಂದೆ ಇನ್ನೋಡಿನ ದೊರೆ ಮಂಗರದರಸನಿಂದ ಪ್ರೇರಕನಾಗಿ, ಆತನು ಆಶಿದೋರಿಸಿದ ಒಂದು ಕಳಸಿಗೆ ತುಂಬಲಷ್ಟು ಚಿನ್ನ ಎರಡಡಿ ಭೂಮಿಗಾಗಿ ದುರಾಶೆ ತೊಟ್ಟು, ಉಚ್ಚಿಲದ ಕಾಡಿನಲ್ಲಿ ಸುರಂಗವನ್ನೊಂದನ್ನು ಮಾಡಿ ಅದರೊಳಗೆ ಅಡಗಿದ್ದ ನಿನ್ನ ಮಾವನಾದ ರಾಜಭಾರಿ ಪಡ್ಡಿಲನನ್ನು ಕೊಂದು ಚೆಲ್ಲಾಡಿದನು! ಭಲೇ! ನೀನು ನಿನ್ನ ತಂದೆಗೆ ನಿನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಿಲ್ಲವೇ? ಮಂಗರದರಸನಿಂದ ಬಹುಮಾನವನ್ನು ತರುವುದಕ್ಕೆ ನೀನು ಹೋಗುವುದಿಲ್ಲವೇ? ಹ್ಹ ... ಹ್ಹಾ....ಹ್ಹಾ!....ಪೋರಶೂರನೇ! ಏಳು!! ಪ್ರತೀಕಾರ ಪ್ರವರ್ತನಾಗು! ನಿನ್ನ ಬೆಂಗಡೆ ಸಹಾಯಕ್ಕೆ ನಾನಿರುತ್ತೇನೆ, ಮಗನೇ!"

ಮಲಗಿದ್ದ ಬಾಲೆಕುಂಞ ಬೆಚ್ಚಿಬಿದ್ದು ಝುಗ್ಗನೆದ್ದು ಹಾಸಿಗೆಯ ಮೇಲೆ ಕೂತುಕೊಂಡನು. ಸ್ವಪ್ನವನ್ನು ಜ್ಞಾಪಿಸುತ್ತಿದ್ದಂತೇ ವಿಲಕ್ಷಣವಾದ ಚಿಕೀರ್ಷೆಯಿಂದೊಡಗೂಡಿದ ಪ್ರಾಯಾತೀತ ಅದಭ್ರ ಬಾಹುಬಲದ ಸಂಚಾರ ಪ್ರವಾಹವೊಂದು ಅವನ ಸರ್ವಾಂಗ ದೇಹದಲ್ಲಿ ವ್ಯಾಪಿಸಿ ಹುರಿಗೊಂಡಿತು!

o o o o

ಇನ್ನೋಡಿನ ದೊರೆ—ಪಡ್ಡಿಲನನ್ನು ವಧಿಸಿ ಅಂದು ರಾತ್ರೆ ಬೆಳಗಾಗುವುದರೊಳಗಾಗಿ ಮಾನಿಮಂಗರದರಮನೆಗೆ ಆಗಮಿಸಿ, ಮಲಗಿದ್ದ ಮಂಗರದರಸನನ್ನು ಎಬ್ಬಿಸಿ ಆತನಿಗೆ ತನ್ನ ಯಶಸ್ವೀ ಕಗ್ಗೊಲೆಯ ವರದಿಯನ್ನು ಮಾಡಿ, ಅತ್ಯಾನಂದಗೊಂಡ ಅರಸನಿಂದ ಮರುದಿನ ಬಂದು ಬಹುಮಾನವನ್ನು ಸ್ವೀಕರಿಸುವ ಅನುಜ್ಞೆಯನ್ನು ಪಡೆದು—ಆಗ ತಾನೇ ಬೆಳಗ್ಗೆ ತನ್ನ ಇನ್ನೋಡಿನ ಬೀಡನ್ನು ಹೋಗಿ ಸೇರಿದ್ದನು.

ಕಂಪುಪೋಲೆದಿ ಗಂಡನಿಗೂ, ಮಗನಿಗೂ ಬೆಳಗಿನ ಗಂಜಿ ಇಕ್ಕುವುದಕ್ಕಾಗಿ ನಡುಮನೆಯಲ್ಲಿ ಎದುರುಬದಿರಾಗಿ ಎರಡು ಮಣೆಗಳನ್ನು ಹಾಕಿದಳು.

ಗಂಜಿ ಊಟಕ್ಕೆ ತಂದೆ-ಮಗ ಇಬ್ಬರೂ ಕೂತರು. ಕಂಪುಪೋಲೆದಿ ಗಂಜಿ ಊಟದ ತಟ್ಟೆ ಬಟ್ಟಲುಗಳನ್ನು ತಂದು ಇಬ್ಬರ ಮುಂದಿಟ್ಟು, ಒಳಗೆ ಸರಿದಳು. ಆಗ ಬಾಲೆ ಕುಂಞ ಎದುರಿಗೆ ಗೋಡೆಯಲ್ಲಿ ತೂಗುತ್ತಿರುವ ರಕ್ತರಂಜಿತವಾದ ತಂದೆಯ ಚಂದ್ರಾಯುಧವನ್ನು ದಿಟ್ಟಿಸಿದನು. ತಟ್ಟನೇ ಮೇಲಕ್ಕೆದ್ದನು. ಅಡಿಗೆಮನೆಗೆ ನುಗ್ಗಿದನು. ಅಲ್ಲಿ ನಿಂತಿದ್ದ ತಾಯಿಗೆ ಪ್ರಶ್ನಿಸಿದನು:

"ತಾಯೀ! 'ನುಪ್ಪಾಯಿ ದಿಕ್ಕೆಲ್'ಡ್ ಕಜಿಪು ದೀವೊಲಿಯಾ?' (ಅನ್ನವಾದ ಒಲೆಯಲ್ಲಿ ಪದಾರ್ಥವಿಡಬಹುದೇ?)"

"ಅದಕ್ಕೇನು? ಇಡಬಹುದು, ಮಗೂ,"—ಅಧೀರಳಾದ ತಾಯಿ ಉಗ್ಗಳಿಸಿದಳು.

ಬಾಲೆ ಕುಂಞ ದಡದಡಿಸಿ ನಡುಮನೆಗೆ ಹೊರಳಿದವನೇ ಗೋಡೆಯಲ್ಲಿ ತೂಗುತ್ತಿರುವ ಚಂದ್ರಾಯುಧಕ್ಕೆ ಕೈಯಿಕ್ಕಿ ಸೆಳೆದನು. ಊಟದಲ್ಲಿ ನಿರತನಾದ ತನ್ನ ತಂದೆಯ ಜುಟ್ಟನ್ನು ಹಿಡಿದು ಬೊಗ್ಗಿಸಿದನು. ಚಂದ್ರಾಯುಧವನ್ನು ಝಳಪಿಸುತ್ತ ಅವನ ಶಿರಚ್ಛೇದ ಮಾಡುವುದಕ್ಕೆ ಉದ್ಯುಕ್ತನಾದಾಗ, ಇನ್ನೋಡಿನ ದೊರೆ ದೀನನಾಗಿ ಈ ರೀತಿ ಮಗನನ್ನು ಯಾಚಿಸಿದನು:

"ಮಗನೇ, ತಾಳು! ನನ್ನ ಮೂರು ಮಾತುಂಟು. ಬಾಯಲ್ಲಿದ್ದ ತುತ್ತನ್ನು ಮರಳಿ ಬಾಯಿಗೆ ಹಾಕಿ ತಿನ್ನುವುದಕ್ಕೆ ಕೊಂಚ ಅವಕಾಶವನ್ನು ಕೊಡು. ಆ ಮೇಲೆ........"

"ಛೀ! ಅರೆಕ್ಷಣಕ್ಕೂ ಬಿಡಲಾರೆ. ನನ್ನ ಮಾವನ ಬಾಯಲ್ಲಿದ್ದ ತುತ್ತನ್ನು ಬಾಯಲ್ಲಿ, ಕೈಯಲ್ಲಿದ್ದ ತುತ್ತನ್ನು ಕೈಯಲ್ಲಿ ಮಾಡಿ ಅವರಿಗೆ ತಿನ್ನಲವಕಾಶವನ್ನೀಯದ ನಿಮ್ಮಂಥ ಸ್ವಜನ ಘಾತುಕ ಕೊಲೆಪಾತಕಿಗೆ ಯುಕ್ತವಾದುದನ್ನೇ ಪ್ರಾಯಶ್ಚಿತ್ತ ಪಡಿಸುವೆನು." ಎಂದು ಗುಡುಗುತ್ತ ಎತ್ತಿದ ಅದೇ ಚಂದ್ರಾಯುಧದಿಂದ ಹೊಡೆದು ತಂದೆಯ ಶಿರಚ್ಛೇದ ಮಾಡಿದನು!

ಬಾಲೆ ಕುಂಞ ಮತ್ತೆ ಅಲ್ಲಿ ಅರೆಘಳಿಗೆಯೂ ನಿಲ್ಲದೆ, ಅಂಬಿನ ವೇಗದಿಂದ ರಾಜಭಾರಿ ಬೀಡಿಗೆ ಧಾವಿಸಿದನು.

o o o o

ರಾಜಭಾರಿ ಬೀಡಿಗೆ ಬಂದ ಬಾಲೆ ಕುಂಞ ತನ್ನ ಅತ್ತೆ ಮಾನಿಪೋಲೆದಿಯನ್ನು ಸಂಧಿಸಿ ಅವಸರವಸರವಾಗಿ ಹೀಗೆಂದನು:

"ಅತ್ತೇ! ರಾಜಭಾರಿ ಬೀಡಿನ 'ಸೂಸುಡರ್' (ನಂದಾದೀಪ) ಆರಿ ಹೋಯಿತು. ನಾನು ಅದನ್ನು ಹೊತ್ತಿಸಿ ಬರುತ್ತೇನೆ. ನನ್ನ ಸಂಗಡ ನೀವು ಕೂಡಾ ಹೊರಡಿರಿ."

ಅತ್ತೆಯನ್ನು ಸಂಗಡ ಕರೆದುಕೊಂಡು ಉಚ್ಚಿಲದ ಕಾಡಿನ ಸುರಂಗ ದ್ವಾರಕ್ಕೆ ಬಂದನು. ಶಿರಚ್ಛೇದಗೊಂಡು ಕೊಲೆಯಾಗಿ ಬಿದ್ದ ತನ್ನ ಮಾವ ರಾಜಭಾರಿ ಪಡ್ಡಿಲನ ಬಲದ ಭಾಗದಲ್ಲಿ ನಿಂತು ಅಜ್ಜನಾದ ನಾರಾಯಣ ದೇವನನ್ನೂ, ಅಜ್ಜಿಯಾದ ಬನ್ನಾರೆ ಬನ್ನಾರಳನ್ನೂ ಸಂಸ್ಮರಿಸಿದನು. ಕಮಂಡಲದ ನೀರು ಮಂತ್ರಿಸಿ ಸಂಜೀವನಿಯನ್ನು ನಾಗದರ್ಭೆಯಿಂದ ಪಡ್ಡಿಲನ ಬೇರ್ಪಟ್ಟ ರುಂಡ ಮುಂಡಗಳಿಗೆ ಚಿಮುಕಿಸಿದನು. ತಕ್ಷಣ ರುಂಡಮುಂಡಗಳು ಒಟ್ಟುಗೂಡಿದವು. ಪಡ್ಡಿಲ ನಿದ್ರೆಯಿಂದ ಎಚ್ಚತ್ತವನಂತೆ ಪುನರ್ಜೀವ ಧರಿಸಿ ಎದ್ದು ಕೂತನು!

"ಕುಂಞ! ಕುಂಞ! ನೀನು ನನ್ನ ಕರೆಗೆ ಓಕೊಟ್ಟು ಬಂದೆಯಲ್ಲಾ, ಮಗನೇ!" ಎಂದು ಪಡ್ಡಿಲ್ಲ ಸಂಭ್ರಮೋತ್ಸವದಿಂದ ನುಡಿಯುತ್ತ ತನ್ನ ಅಳಿಯನನ್ನು ತಬ್ಬಿ ಆಲಿಂಗಿಸಿಕೊಂಡನು!

ಎಲ್ಲರೂ ಅವರ್ಣನೀಯವಾದ ಆನಂದದಿಂದ ಮೈಮರೆತು ಆ ಸ್ಥಳದಲ್ಲಿ ಕೊಂಚ ಹೊತ್ತು ಸಲ್ಲಾಪಿಸುತ್ತ ಕಳೆದರು. ಬಳಿಕ ಬಾಲೆಕುಂಞ ಮಾವ ಮತ್ತು ಅತ್ತೆಯನ್ನು ರಾಜಭಾರಿ ಬೀಡಿಗೆ ಕರೆದುಕೊಂಡು ಬಂದನು.

"ಮಾವಾ! ನಿಮ್ಮ ಬೀಡಿನ ಆರಿ ಹೋದ "ಸೂಸುಡರ"ನ್ನು ಬೆಳಗಿಸಿದೆನು. ಅದಿನ್ನು ಪರವಾಯಿ! ನಾನಿನ್ನು ಹೊರಡುತ್ತೇನೆ. ಇನ್ನೆರಡು ಕಾರ್ಯಗಳು ನನ್ನ ದಾರಿ ನೋಡುತ್ತಿವೆ—ಒಂದು ಘಾತಕ್ರಿಯೆ, ಇನ್ನೊಂದು ಬಹುಮಾನ ಸ್ವೀಕರಣ! ನಾನು ಅವುಗಳನ್ನು ನೆರವೇರಿಸಿಕೊಂಡು ಬರುತ್ತೇನೆ."—ಈ ರೀತಿ ಬಾಲೆ ಕುಂಞ ಮಾವನಿಗೆ ಒರೆದು ರಾಜಭಾರಿ ಬೀಡಿಂದ ಹೊರಟುಬಿಟ್ಟನು.

ಇನ್ನೋಡಿನ ಬೀಡಿಗೆ ಬಾಲೆ ಕುಂಞ ಬಂದನು. ನಡುಮನೆಯಲ್ಲಿ ಬಿದ್ದುಕೊಂಡ ತಂದೆಯ ಹೆಣದ ಕಾಲಿಗೆ ಹಗ್ಗದಿಂದ ಒಣಗಲು ಬಲ್ಯಾರು ಮೀನಿನ ತುಂಡೊಂದನ್ನು ಬಿಗಿದುಕಟ್ಟಿ ಕಾಳು ನಾಯಿಂದ ಶವವನ್ನು ಸುಡುಗದ್ದೆಗೆ ಎಳೆಯಿಸಿದನು. ಅಲ್ಲಿ ಹೆಣದ ಮೇಲೆ ಕಾಷ್ಠವನ್ನು ಊರಿದನು. ಶವದಹನ ಮಾಡಿದನು!

ಬೀಡಿಗೆ ಮರಳಿದನು. ಚಂದ್ರಾಯುಧವನ್ನು ಎತ್ತಿ ಅದನ್ನೊಂದು ಗೋಣಿ ಚೀಲದೊಳಗೆ ತುರುಬಿದನು. ಚೀಲವನ್ನು ಹಿಡಿದುಕೊಂಡು ಮಾನಿಗುಂಗರದ ಅರಮನೆಗೆ ಕಾಲುಕಿತ್ತನು.

ಮಂಗರದರಸ ತನ್ನ ವಿಶ್ರಾಮಧಾಮದಲ್ಲಿ ತೂಗುಯ್ಯಾಲೆಯ ಮೇಲೆ ಕೂತಿದ್ದನು. ಅಲ್ಲಿಗೆ ಬಾಲೆಕುಂಞ ಪ್ರವೇಶಿಸಿದನು.

"ಅರಸರೇ, ತಂದೆಯವರು ದಣಿದುದರಿಂದ ಕೊಂಚ ದೇಹಾಲಸ್ಯಪಟ್ಟು ಮನೆಯಲ್ಲಿ ಮಲಗಿದ್ದಾರೆ. ನನ್ನನ್ನು ಗೋಣಿ ಚೀಲಕೊಟ್ಟು ಕಳುಹಿಸಿದರು." ಎಂದು ಬಾಲೆಕುಂಞ ಮಂಗರದರಸನಿಗೆ ಬಿನ್ನಯಿಸಿದನು.

"ಒಳ್ಳೆದು! ಬಹುಮಾನ ತೆಕ್ಕೊಂಡು

120. ತಥೇತಿ ಸೋಽಂತರ್ಧಿಮ
ಪಾಸ್ತಮೋಹೇ
ಗತೇ ಚಿರಂಜೀವಿ
ಮುನಾವಥಾಸೌ ।
ವೃತ್ತಾಂತಮೇತಂ
ಸ ಮುದಾಽಽಶ್ರವೇಭ್ಯಃ
ಸಂಶ್ರಾವಯಂಸ್ತಾಂ
ಕ್ಷಣದಾಮನೈಷೀತ್ ॥

ತಥಾಸ್ತು-ಹಾಗೆ ಆಗಲಿ ಎಂದು ಆ ಮುನಿಯು ಅಂತರ್ಧಾನನಾದನು. ಶಂಕರಾಚಾರ್ಯನು ತನ್ನ ಶಿಷ್ಯರಿರುವಲ್ಲಿಗೆ ಬಂದು ಈ ವಿಚಾರವನ್ನು ಹೇಳುತ್ತಾ ಆ ರಾತ್ರಿಯನ್ನು ಕಳೆದನು.

ಶ್ರೀ ವಿದ್ಯಾರಣ್ಯ ವಿರಚಿತ
ಸಂಕ್ಷಿಪ್ತ ಶ್ರೀ ಶಂಕರ ವಿಜಯ

(ಶ್ರೀ। ಕೋ. ಶ. ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು-3)

(ಕಳೆದ ಸಂಚಿಕೆಯಿಂದ ಮುಂದುವರಿದುದು)

121. ದ್ವಾರೈರ್ಯುಕ್ತಂ
ಮಂಟಪೈಸ್ತಚ್ಚತುರ್ಭಿ
ದೇವ್ಯಾ ಗೇಹಂ
ಯತ್ರ ಸರ್ವಜ್ಞಪೀಠಮ್ ।
ಯತ್ರಾರೋಹೇ
ಸರ್ವವಿತ್ ಸಜ್ಜನಾನಾಂ
ನಾನ್ಯೇ ಸರ್ವೇಯತ್ರ ವೇಷ್ಟುಂ
ಕ್ಷಮಂತೇ ॥

122. ವಾರ್ತಾಮುಪಶ್ರುತ್ಯ
ಸ ದಾಕ್ಷಿಣಾತ್ಯೋ
ಮಾನಂ ತದೀಯಂ
ಪರಿಮಾತುಮಿಚ್ಛನ್
ಕಾಶ್ಮೀರದೇಶಾಯ
ಜಗಾಮ ಹೃಷ್ಟಃ
ಶ್ರೀ ಶಂಕರೋ
ದ್ವಾರಮಪಾವರೀತುಮ್ ॥

ಕಾಶ್ಮೀರ ಮಂಡಲದಲ್ಲಿರುವ ಶಾರದಾ ದೇವಸ್ಥಾನದಲ್ಲಿ ನಾಲ್ಕು ದ್ವಾರಗಳಿರುವ ಮಂಟಪದಲ್ಲಿ ಸರ್ವಜ್ಞ ಪೀಠವಿದೆ. ಸರ್ವಜ್ಞರಾದವರಿಗೆ ಮಾತ್ರ ಇದನ್ನು ಪ್ರವೇಶಿಸಿ, ಪೀಠವನ್ನೇರಬಹುದಲ್ಲದೆ ಇತರರು ಪ್ರವೇಶಿಸಲಿಕ್ಕೆ ಸಾಧ್ಯವೇ ಇಲ್ಲ. ಎಂಬೀ ವಾರ್ತೆಯನ್ನು ಕೇಳಿ ದಾಕ್ಷಿಣಾತ್ಯನಾದ (ದಕ್ಷಿಣ ದೇಶದವನಾದ) ಶಂಕರಾಚಾರ್ಯನು ಇದರ ಸತ್ಯವನ್ನು ನಿಶ್ಚಯಿಸುವುದಕ್ಕಾಗಿ ಸಂತೋಷದಿಂದ ದಕ್ಷಿಣ ದ್ವಾರವನ್ನು ತೆರೆಯುವುದಕ್ಕೆ ಕಾಶ್ಮೀರ ದೇಶಕ್ಕೆ ಹೊರಟು ಹೋದನು.

123. ಶ್ರೀ ದಕ್ಷಿಣದ್ವಾರಭುವಂ
ಪ್ರಪೇದೇ
ಕವಾಟಮುದ್ಘಾಟ್ಯ
ನಿವೇಷ್ಟುಕಾಮಂ
ಸ ಸಂಭ್ರಮಂ
ವಾದಿಗಣೋನ್ಯರೌತ್ಸೀತ್ ॥

ಶಂಕರಾಚಾರ್ಯರು ದಕ್ಷಿಣ ದ್ವಾರವನ್ನು ಸೇರಿ ಅದರ ಬಾಗಿಲನ್ನು ತೆರೆದು ಒಳಗೆ ಪ್ರವೇಶ ಮಾಡುವಾಗ, ವಾದಿಗಳ ಗುಂಪು ತಡೆಗಟ್ಟಿಬಿಟ್ಟಿತು.

124. ಶಾಸ್ತ್ರೇಷು ಸರ್ವೇಷ್ವಪಿ
ದತ್ತವಂತಂ
ಪ್ರತ್ಯುತ್ತರಂ ತಂ
ಸಮಪೂಜಯಂಸ್ತೇ ।
ದ್ವಾರಂ ಸಮುದ್ಘಾಟ್ಯ
ದದುಶ್ಚ ಮಾರ್ಗಂ
ತತೋ ವಿವೇಶಾಂತರ
ಭೂಮಿ ಭಾಗವತ್ ॥

ಅಲ್ಲಿ ನೆರೆದಿದ್ದ ಸರ್ವ ವಿದ್ವಾಂಸರು ಕೇಳಿದ ಸರ್ವ ಶಾಸ್ತ್ರಗಳ ಪ್ರಶ್ನಾವಳಿಗಳಿಗೆ ಸರಿಯಾದ ಉತ್ತರವನ್ನು ಕೊಡಲಾಗಿ ಅವರೆಲ್ಲರೂ ಶಂಕರಾಚಾರ್ಯರನ್ನು ಚೆನ್ನಾಗಿ ಸನ್ಮಾನಿಸಿದರು. ಆ ಮೇಲೆ ಅವರೇ ದಕ್ಷಿಣ ದ್ವಾರವನ್ನು ತೆರೆದು ಮಾರ್ಗವನ್ನು ಬಿಟ್ಟುಕೊಟ್ಟರು. ಶಂಕರಾಚಾರ್ಯರು ಒಳಗೆ ಪ್ರವೇಶಿಸಿ ಪೀಠವನ್ನೇರಿದರು.

125. ಇತಿ ಮುನಿರತಿತುಷ್ಟೋಽ
ಧ್ಯಾಸ್ಯ ಸರ್ವಜ್ಞಪೀಠಂ
ನಿಜಮತಗುರುತಾಯೈ
ನೋಪುನರ್ಮಾನಹೇತೋಃ ।
ಕತಿ ಚ ನ ವಿನಿವೇಶ್ಯ
ಧರ್ಮ್ಯಶೃಂಗಾಮಾದೌ
ಮುನಿರಥ ಬದರೀಂ ಸ
ಪ್ರಾಪಕೈಶ್ಚಿತ್ಸ್ವಶಿಷ್ಯೈಃ ॥

ಈ ಪ್ರಕಾರ ತನ್ನ ಅದ್ವೈತ ಮತದ ಗೌರವಕ್ಕಾಗಿಯೇ ಹೀಗೆ ಅತೀವ ಸಂತುಷ್ಟನಾಗಿ ಸರ್ವಜ್ಞ ಪೀಠದಲ್ಲಿ ಆಸೀನನಾದನು. ತನ್ನ ಪ್ರತಿಷ್ಠೆಗಾಗಿಯಾಗಲಿ, ಗರ್ವಕ್ಕಾಗಿಯೂ ಕುಳಿತುದಲ್ಲವು. ಆ ನಂತರ ಕೆಲವು ಶಿಷ್ಯರನ್ನು ಶೃಂಗೇರಿ ಮೊದಲಾದ ಪೀಠಗಳಿಗೆ ಪೀಠಾಧಿಪತಿಗಳಾಗಿ, ಕಳುಹಿಸಿದನು. ಕೆಲವರನ್ನು ಕರಕೊಂಡು ಬದರೀಕಾಶ್ರಮಕ್ಕೆ ತೆರಳಿದನು.

126. ಏವಂ ಪ್ರಕಾರೈ
ಕಲಿಕಲ್ಮಷಘ್ನೈಃ
ಶಿವಾವತಾರಸ್ಯ
ಶುಭೈಶ್ಚರಿತ್ರೈಃ ।
ದ್ವಾತ್ರಿಂಶದತ್ಯುಜ್ಜಲ
ಕೀರ್ತಿರಾಶೇಃ
ಸಮಾವ್ಯತೀಯುಃ
ಕಿಲ ಶಂಕರಸ್ಯ ॥

ಈ ಪ್ರಕಾರ ಕಲಿಗಾಲದ ಪಾಪಗಳನ್ನು ನಾಶಮಾಡುವುದಕ್ಕಾಗಿ, ಮಂಗಳಮಯವಾದ ಚರಿತ್ರೆ ಮತ್ತು ಅತ್ಯುಜ್ವಲ ಕೀರ್ತಿರಾಶಿ ಇರುವ ಈಶ್ವರಾವತಾರನಾದ ಶಂಕರಾಚಾರ್ಯನಿಗೆ ಇಷ್ಟಾಗುವಾಗ ಮೂವತ್ತೆರಡು ಸಂವತ್ಸರಗಳು ಕಳೆದವು.

127. ಪಾರಿಕಾಂಕ್ಷೀಶ್ವರೋಽಪ್ಯಾಪ
ದುದ್ಧಾರಕಂ
ಸೇವಮಾನಾತುಲಸ್ವಸ್ತಿ
ವಿಸ್ತಾರಕಮ್ ।
ಪಾಪದಾವಾನಲಾತಾಪ
ಸಂಹಾರಕಂ
ಯೋಗಿಬೃಂದಾಧಿಪಃ
ಪ್ರಾಪಕೇದಾರಕಮ್ ॥

ಆ ಬಳಿಕ ಮಹೇಶ್ವರನಾದ ಶಂಕರಭಗವತ್ಪಾದನು ಜನರ ವಿಪತ್ತನ್ನು ನಿವಾರಿಸುವುದಕ್ಕಾಗಿಯೂ, ತನ್ನನ್ನು ಸೇವಿಸುವವರನ್ನು ಉದ್ಧರಿಸುವುದಕ್ಕಾಗಿಯೂ, ಜನ್ಮವೆತ್ತಿದನು. ಪಾಪವೆಂಬ ದಾವಾಗ್ನಿಯ ತಾಪವನ್ನು ನಾಶಮಾಡುವ ಮತ್ತು ಯೋಗಿಗಳಿಗೆ ಮಾತ್ರ ಹೋಗಲು ಸಾಧ್ಯವಾದ ಕೇದಾರ ಕ್ಷೇತ್ರಕ್ಕೆ ಬಂದು ಸೇರಿದನು.

128. ತತ್ರಾತಿ ಶೀತಾರ್ದಿತ
ಶಿಷ್ಯಸಂಘ
ಸಂರಕ್ಷಣಾಯಾತುಲತ ತ
ಪ್ರಭಾವಃ ।
ತಪೋದಕಂ
ಪ್ರಾರ್ಥಯತೇಸ್ಮ
ಚಂದ್ರಕಲಾಧರಾತ್ತೀರ್ಥಕರ
ಪ್ರಧಾನಃ ॥

ಆ ಕೇದಾರದಲ್ಲಿ ಚಳಿಯ ಪೀಡೆಯಿಂದ ಕಂಗೆಟ್ಟಿದ್ದ ತನ್ನ ಶಿಷ್ಯರ ರಕ್ಷಣೆಗಾಗಿ ಮಹಾನುಭಾವನಾದ ಶಂಕರನು ಚಂದ್ರನನ್ನು ಧರಿಸಿರುವ ಈಶ್ವರನನ್ನು ಬಿಸಿನೀರಿನ ಪ್ರವಾಹವನ್ನು ಪ್ರಾರ್ಥಿಸಿದನು.

129. ಕಮ್ರಂದಿ ವೃಂದಪತಿನಾ
ಗಿರಿಶೋಽರ್ಥಿತಃ ಸನ್
ಸಂತಪ್ತವಾರಿಲಹರೀಂ
ಸ್ವಪಾದಾರವಿಂದಾತ್

ಯತಿಗಳಿಗೆಲ್ಲಾ ರಾಜೇಂದ್ರನಾದ ಗಿರೀಶನು ಪ್ರಾರ್ಥಿಸಲ್ಪಟ್ಟಂತೆ ತನ್ನ ಪಾದಕಮಲದಿಂದ ಉಷ್ಣ ಜಲಪ್ರವಾಹವನ್ನು ಸೃಜಿಸಿದನು.

130. ಆರುಹ್ಯೋಕ್ಷಾಣಮಗ್ರ್ಯಂ
ಪ್ರಕಾಶಿತಸು ಜಟಾಜೂಟ
ಚಂದ್ರಾವತಂಸಃ ।
ಶೃಣ್ವನ್ನಾಲೋಕಶಬ್ದಂ
ಸಮುದಿತಮೃಷಿಭಿ
ರ್ಧಾಮ ಸ್ವೈಜಂ ಪ್ರತಸ್ಥೇ ॥

ಬಿದಿಗೆಯ ಚಂದ್ರನನ್ನು ಜಡೆಯಲ್ಲಿ ಧರಿಸಿದ ಕಿರೀಟವಿರುವ ಈಶ್ವರರೂಪನಾದ ಶಂಕರನು ಶ್ರೇಷ್ಠವಾದ ವೃಷಭವನ್ನೇರಿ, ಸ್ತುತಿಪಾಠಕರಿಂದ ಋಷಿಗಳಿಂದ ಹೇಳಲ್ಪಟ್ಟ ಸ್ತೋತ್ರಗಳನ್ನು ಕೇಳುತ್ತ ತನ್ನ ನಿಜ ಧಾಮವಾದ ಕೈಲಾಸಕ್ಕೆ ಪ್ರಸ್ಥಾನಗೈದನು.

— ಸಂಪೂರ್ಣ —

—೦—

ಹೋಗು." ಎಂದಾಡಿ ಮಂಗರದರಸ ಎದ್ದು, ಕೋಶಾಗಾರಕ್ಕೆ ಬಾಲೆಕುಂಜನನ್ನು ಕರೆದೊಯ್ದನು.

ಕೋಲು ಹಿಡಿದು ಮಂಗರದರಸ ಒಂದು ಕಳಸಿಗೆ ಚಿನ್ನವನ್ನು ಅಳೆಯತೊಡಗಿದನು. ಅಷ್ಟರಲ್ಲಿ ಬಾಲೆಕುಂಜ ಗೋಣಿಚೀಲದೊಳಗಿನಿಂದ ಚಂದ್ರಾಯುಧವನ್ನು ಸರಕ್ಕನೇ ಹೊರ ಸೆಳೆದನು. ದಿಮ್ಮನೇ ಹಾರಿ ಮಂಗರದರಸನ ಮೇಲೆರಗಿದನು. ಅವನನ್ನು ಕೆಡವಿ ಅವನ ಜುಟ್ಟನ್ನು ತನ್ನ ಎಡದಕೈಯ ಮುಷ್ಟಿಯಲ್ಲಿ ಹಿಡಿದುಕೊಂಡನು. ಬಲದ ಕೈಯಿಂದ ಚಕಚಕನೇ ಜ್ವಲಿಸುತ್ತಿರುವ ಚಂದ್ರಾಯುಧವನ್ನು ಮೇಲಕ್ಕೆತ್ತಿದನು. ಮಂಗರದರಸ ಒಮ್ಮಿಂದೊಮ್ಮೆ ಸಂಭವಿಸಿದ ಈ ಆಕ್ರಮಣದಿಂದ ಜಂಘಾಬಲವೇ ಉಡುಗಿ ಹೋದವನಂತಾಗಿ ಜೀವಭಯದಿಂದ ತರತರನೇ ನಡುಗುತ್ತ ಬಾಲೆಕುಂಜನಿಗೆ ಈ ರೀತಿ ಮೊರೆಯಿಟ್ಟನು:

"ಮಗನೇ ನಿಲ್ಲು! ನಿಲ್ಲು! ನನ್ನ [illegible] ಮಾತುಂಟು........"

ಬಾಲೆಕುಂಜ ಅವನನ್ನು ಮುಂದೆ ಮಾತನಾಡಗೊಡದಂತೆ ತಡೆದು ಕಣ್ಣಿನಿಂದ ಕಿಡಿ ಹಾರಿಸುತ್ತ ಈ ರೀತಿ ಮೊಳಗಿದನು:

"ಎಲೈ ನರಾಧಮನೇ! ನನ್ನ ಮಾವನನ್ನು, ನಿನ್ನ ಬಹುಮಾನದ ದುರಾಶೆಗೆ ಬಲಿಯಾದ ನನ್ನ ತಂದೆ—ಉಚ್ಚಿಲದ ಕಾಡಿನಲ್ಲಿ, ಮಾವನ ಬಾಯಿಯಲ್ಲಿದ್ದ ಒಂದು ತುತ್ತು ಅನ್ನವನ್ನು ನುಂಗಲಿಕ್ಕೆ ಬಿಡದೆ, ಕೈಯಲ್ಲಿದ್ದ ತುತ್ತನ್ನು ಬಾಯಿಗೆ ತುರುಕಿಸಿ ತಿನ್ನುವುದಕ್ಕೆ ಅವರಿಗೆ ಅವಕಾಶವನ್ನು ಕೊಡದೆ—ಕೊಲೆಗೈದರು. ಮತ್ತೆ ನಿನಗೆ ನಾನು ಅವಕಾಶಕೊಡಬೇಕೇ? ಹೆ....ಹ್ಹಾ....ಹ್ಹಾ! ನನ್ನ ತಂದೆಗೆ ನಾನು ಕೊಡಲಿಲ್ಲ! ಮತ್ತೆ ನಿನಗೆ ಕೊಟ್ಟೇನೇ? ಮದಾಂಧನೇ! ಕಳಸಿಗೆ ತುಂಬಲಷ್ಟು ಚಿನ್ನವನ್ನು ಮೊದಲೆಷ್ಟು ನೀನು ಕೊಟ್ಟಿರುತ್ತಿ? ಇನ್ನು ಎಷ್ಟು ಕೊಡಲುಂಟು? ಕಾಮಾಂಧನೇ! ಮೊದಲೆಷ್ಟು ಒಕ್ಕೈತ್ರಿ ಬಾರಗರ ಹೆಣ್ಣುಗಳನ್ನು ಮದುವೆಯಾಗಿರುವೆ? ಇನ್ನು ಮೇಲೆ ಎಷ್ಟು ಆಗಲಿಕ್ಕುಂಟು? ದುರಾತ್ಮನೇ ಸಾಯು! ಸಾಯು!!"

ಮಂಗರದರಸನ ತಲೆಯನ್ನು ತಂದು ಮುಂಡದಿಂದ ರುಂಡವನ್ನು ಬೇರ್ಪಡಿಸಿ ಚೆಲ್ಲಿದನು! ರುಂಡವನ್ನು ನೀಳವಾದೊಂದು ಬಿದಿರುದೋಟಿಗೆ ಸಿಕ್ಕಿಸಿ ಅದನ್ನು ಅರಮನೆಯ ಮುಂಭಾಗದ ಪ್ರಾಂಗಣದಲ್ಲಿ ನೆಟ್ಟನು. ಮುಂಡವನ್ನು ಕಡಿದು ಏಳು ಹೋಳು ಮಾಡಿದನು. ಅವುಗಳನ್ನು ಅರಮನೆಯ ಏಳು ದ್ವಾರಗಳಿಗೆ ಏಳು ತೋರಣ ಕಟ್ಟಿದನು!

ಬಳಿಕ ಅಲ್ಲಿಂದ ಬಾಲೆಕುಂಜ ಹೊರಳಿದನು. ಇನ್ನೋಡಿನ ಬೀಡಿಗೆ ಬಂದನು. ತನ್ನ ತಾಯಿ ಕಂಪು ಪೋಲೆದಿಯನ್ನು ಆ ಬೀಡಿನಿಂದ ಸಾಗಿಸಿಕೊಂಡು ಹೋಗಿ ರಾಜಭಾರಿ ಬೀಡನ್ನು ಸೇರಿದನು.

— ಎಂ. ನಾರಾಯಣ,
ಮಂಗಳೂರು.

— —